Horticulture Activities in Gulbarga

9. Sri BAPU GOWDA (Shahapur)—

Will the Minister of State for Fisheries and Horticulture be pleased to state :—

the amount provided for the development of Horticultural activities in Gulbarga Division in 1973-74 and 1974-75 (Districtwise information may be furnished)?

Sri K. T. RATHOD (Minister of State for Fisheries and Horticulture).—

The amount provided is indicated below :

(*in Rupees*)

Year	Raichur Dist.	Bellary Dist.	Gulbarga Dist.	Bidar Dist.	Tolal
1973-74	2,71,350	3,79,000	1,89,950	1,00,450	9,40,750
1974-75	3,55,600	4,29,500	1,58,000	53,000	9,96,100

ಎಷ್ಟರವರೆಗೆ ತೋರಿಸಿರುವ ಹಣದ ವ್ಯವಸ್ಥೆಯೇ ಅಲ್ಲದೆ ಬೇರೆ ಎಂದೆರಡು ಯೋಜನೆಗಳ ಕೆಳಗೆ ಹೆಚ್ಚಿನ ಹಣವನ್ನು ಕೂಡ ಒದಗಿಸಲಾಗಿದೆ. ಎಂದನೆಯದು ಡಾಲ್ಟ್ ಪ್ರೊಜೆಕ್ಟ್ ಏರಿಯಾ ಪ್ರೋಗ್ರಾಮ್ ಕೆಳಗೆ ರಾಯಚೂರು, ಗುಲ್ಬರ್ಗ, ಬಳ್ಳಾರಿ ಈ ಮೂರು ಜಿಲ್ಲೆಗಳಿಗೆ 2.52 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಅದೇ ರೀತಿ ಆಯಿಲ್ ಸೀಡ್ಸ್ ವಿಲೇಜ್ ಪ್ರೋಗ್ರಾಂ ಎಂದು ಇದೆ. ಅದರ ಪ್ರಕಾರ ತುಂಗಭದ್ರಾ ಪ್ರಾಜೆಕ್ಟ್ ಕೆಳಗೆ ಬರತಕ್ಕ ರಾಯಚೂರು ಜಿಲ್ಲೆಗೆ 2,25,600 ರೂಪಾಯಿಗಳನ್ನು, ಬಳ್ಳಾರಿ ಜಿಲ್ಲೆಗೆ 1,98,000 ರೂಪಾಯಿಗಳನ್ನೂ ಇಟ್ಟಿದೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಕೆಳಗೆ ಗುಲ್ಬರ್ಗಾ, ನಾರಾಯಣ ಪುರ—ಇವುಗಳಿಗೂ ಕೂಡ ಹಣವನ್ನು ಒದಗಿಸಲಾಗಿದೆ. ಒಟ್ಟು 3,48,600 ರೂಪಾಯಿಗಳನ್ನು ಅಲ್ಲಿನ ತೋಟಗಾರಿಕೆ ಅಭಿವೃದ್ಧಿಗಾಗಿ ಒದಗಿಸಲಾಗಿದೆ.

ಶ್ರೀ ಬಾಪುಗೌಡ.—ತಾವು ಕೊಟ್ಟಂಥ ಸ್ಟೇಟ್‌ಮೆಂಟಿನಲ್ಲಿ 1973—74ನೇ ಸಾಲಿಗೆ 9,40,750 ರೂಪಾಯಿಗಳನ್ನೂ, 1974-75ನೇ ಸಾಲಿಗೆ 9,96,100 ರೂಪಾಯಿಗಳನ್ನು ತೋಟಗಾರಿಕೆ ಅಭಿವೃದ್ಧಿ ಕಾರ್ಯಗಳಿಗೆ ಒದಗಿಸಲಾಗಿದೆ ಎಂದು ತಿಳಿಸಿದ್ದೀರಿ. ಗುಲ್ಬರ್ಗಾ ಡಿವಿಜನ್‌ನಿಂದ ತೋಟಗಾರಿಕೆ ಅಭಿವೃದ್ಧಿ ಕಾರ್ಯಗಳಿಗಾಗಿ, ನಂಬಿಂದಪಟ್ಟ ಅಧಿಕಾರಿಗಳು 1974-75ನೇ ಸಾಲಿಗೆ ಎಷ್ಟು ಹಣ ಬೇಕು ಎಂದು ಕೇಳಿದ್ದಾರೆ ?

† ಶ್ರೀ ಕೆ. ಟಿ. ರಾಥೋಡ್.—ಇಂತಿಂಥ ಕಾರ್ಯಕ್ರಮಗಳಿಗೆ ಇಷ್ಟಿಷ್ಟು ಹಣ ಬೇಕಾಗಿದೆ ಎಂದು ತರಿಸಿದ್ದರ ಏವರ ಈಗ ಇಲ್ಲ ಇಲ್ಲ. ಆದರೆ, ಸರಕಾರವವರು ಹಣವನ್ನು ಒದಗಿಸುವಾಗ, ಯಾವ ಯಾವ ಭಾಗದಲ್ಲಿ ಯಾವ ಯಾವ ಬೆಳೆಗಳಿಗೆ ಯೋಗ್ಯವೋ ಅಂತಹ ಕಡೆ ಯೋಜನೆ ಮಾಡಿ, ಹಣ ಒದಗಿಸುವ ವ್ಯವಸ್ಥೆ ಇದೆ. ಗುಲ್ಬರ್ಗಾ ಏರಿಯಾ ಆಗಲೀ ಅಥವಾ ಮುಂಬಯಿ ಕರ್ನಾಟಕದ ಏರಿಯಾ ಆಗಲೀ, ಆಯಾ ಭಾಗದಲ್ಲಿ ಯಾವ ಬೆಳೆಗಳನ್ನು ಬೆಳೆಯುತ್ತಾರೆ, ಯಾವ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯ ಇದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಹಣವನ್ನು ಒದಗಿಸಲಿಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ, ಕಳೆದ ಸಲ ಡಿವಿಜನ್‌ವಾರ್. ಅಕೆ ಬಿ ಮತ್ತು ಕಾನ್ಸಿಲ್ ಸದಸ್ಯರನ್ನು ಕರೆದು, ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬ ವಿವರಣೆಗಳನ್ನು ತೆಗೆದುಕೊಂಡಿದ್ದೇವೆ. ಎಲ್ಲಿ ಹೆಚ್ಚು ಅವಶ್ಯಕತೆ ಇದೆ, ಅಲ್ಲಿಗೆ ಹೆಚ್ಚಿನ ಗಮನ ಕೊಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡುತ್ತಾರೆ.

ಶ್ರೀ ಬಾಪುಗೌಡ.—ಗುಲ್ಬರ್ಗಾ ಡಿವಿಜನ್‌ನಲ್ಲಿ 2-3 ವರ್ಷಗಳಿಂದ ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಖಾತೆಯ ವತಿಯಿಂದ ತೋಟಗಾರಿಕೆ ಅಭಿವೃದ್ಧಿ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗಿದೆ. ಆದರೆ, ಈ ಕಾರ್ಯಕ್ರಮಗಳ ನಿಮಿತ್ತವಾಗಿ ತಾವು ಒದಗಿಸಿರುವ ಹಣ ಕಡಮೆ ಅಲ್ಲವೇ ?

ಶ್ರೀ ಕೆ. ಟಿ. ರಾಥೋಡ್.—ಎರ್ನಾ ದೃಷ್ಟಿಯಿಂದ ನೋಡುವುದಾದರೆ, ಈಗ ಒದಗಿಸಿರತಕ್ಕ ಹಣ ಕಡಮೆಯಾಗಿದೆ ಎಂದು ನನಗಾದರೂ ಅನಿಸುತ್ತಾ ಇಲ್ಲ. ಅಲ್ಲಿನ ಪರಿಸ್ಥಿತ ಮತ್ತು ಉತ್ಪನ್ನ ಜಾಗದ ಅವಕಾಶಗಳನ್ನು ನೋಡಿಕೊಂಡು ನಾವು ವಿಶೇಷವಾದಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಈಗ ಕಳೆದ 6-7 ತಿಂಗಳುಗಳಿಂದ ಸರಕಾರದವರು ಅಲ್ಲಿ ವಿಶೇಷವಾದಂಥ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ.

Registration of Unqualified Doctors as R.M.P.S.

10. **S. M. SHEERANALY CHANDRASEKHAR** (Hosanagar).—

Will the Minister for Health be pleased to state :—

(*a*) whether it is a fact that the Government of India has asked the State Government to reconsider its earlier decision regarding registration of unqualified doctors as registered medical practitioners ;

(*b*) if so, the action taken on the suggestions made by the Government of India ?

Sri H. SIDDAVEERAPPA (Minister for Health)-—

(*a*) Yes.

(*b*) The matter is under examination.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು ಹಿಂದೆ ಕೈಗೊಂಡ ಆಧಾರದ ಮೇಲೆ ಕೇಂದ್ರ ಸರ್ಕಾರವು ಆದೇಶ ಏನು? ಅದರ ಬಗ್ಗೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

†ಶ್ರೀ ಎಚ್. ಸಿದ್ಧವೀರಪ್ಪ.—ಅವರು ಹಿಂದೆ ಕೇಳಿದ್ದು, ನಾನ್ ಕ್ವಾಲಿಫೈಡ್ ಮೆಡಿಕಲ್ ಪ್ರ್ಯಾಕ್ಟಿಷನರ್‌ಗಳು ಬಹಳ ಜನರಿದ್ದಾರೆ, ದೇಶದಲ್ಲಿ ಅವರಿಗೆ ಪ್ರ್ಯಾಕ್ಟೀಸ್ ಮಾಡಲಿಕ್ಕೆ ಅವಕಾಶ ಮಾಡಿಕೊಡಿ ಎಂದು. ಅದಕ್ಕೆ ಆಗುವುದಿಲ್ಲ ಎಂದು ಜವಾಬು ಕೊಟ್ಟಿದ್ದಾರೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್. - ಅನಂತರ, ಬೇರೆ ಯಾವುದಾದರೂ ಆದೇಶ ಕೇಂದ್ರ ಸರಕಾರದವರಿಂದ ಬಂದಿದೆಯೇ ?

ಶ್ರೀ ಎಚ್. ಸಿದ್ಧವೀರಪ್ಪ.—ಪುನರ್ ಪರಿಶೀಲನೆ ಮಾಡಿ ಎಂದು ಬಂದಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ಎಚ್. ಸಿದ್ಧವೀರಪ್ಪ.—ಇದನ್ನು ಪುನರ್ ಪರಿಶೀಲನೆ ಮಾಡುವುದಕ್ಕಾಗಿ, ಇಂಡಿಯನ್ ಮೆಡಿಕಲ್ ಕಾನ್ಸಿಲ್ ಮತ್ತು ಸ್ಟೇಟ್ ಮೆಡಿಕಲ್ ಕಾನ್ಸಿಲ್ ಅವರನ್ನು ಕೇಳಿದ್ದಕ್ಕೆ ಅವರು ಅವರಿಗೆ ಸರಿಯಾಗಿ ಗೊತ್ತಿರುವುದಿಲ್ಲ, ಆದುದರಿಂದ, ಅವಕಾಶ ಕೊಡಕೂಡದು ಎಂದು ಒಂದುಸಲ ಕೇಳಿದ್ದಾರೆ; ಇನ್ನೊಂದು ಸಲ, 10 ವರ್ಷ ಮೇಲ್ಪಟ್ಟು ಕೆಲಸ ಮಾಡಿದ್ದರೆ, ಅವರಿಗೆ ಪ್ರ್ಯಾಕ್ಟೀಸ್ ಮಾಡುವುದಕ್ಕೆ ಅವಕಾಶ ಕೊಡಬಹುದು ಎಂದು ಕೇಳಿದ್ದಾರೆ. ಸರಕಾರ, ಇವರ ಬಗ್ಗೆ ಇನ್ನೂ ಯಾವುದೂ ತೀರ್ಮಾನವನ್ನು ತೆಗೆದುಕೊಂಡಿಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಹಾಲಿ, ಕೆಲವು ಕಾಲ ಕಾಂಪೌಂಡರ್ ಆಗಿದ್ದವರೂ ಕೂಡ, ರಿಜಿಸ್ಟರ್ ಮಾಡಿಸಿಕೊಂಡು, ಹಳ್ಳಿಗಳಲ್ಲಿ ಡಾಕ್ಟರ್ ಎಂದು ಬೋರ್ಡ್ ಹಾಕಿಕೊಂಡು ಪ್ರ್ಯಾಕ್ಟೀಸ್ ಮಾಡುತ್ತಾ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ಧವೀರಪ್ಪ.—ಮಾಡುತ್ತಾ ಇರುವುದು ಗಮನಕ್ಕೆ ಬಂದಿದೆ. ಮೆಡಿಕರ್ ಆ್ಯಕ್ಟ್ ಪ್ರಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳಬೇಡಿ ಎಂದು ಕೇಂದ್ರ ಸರಕಾರದ ಆದೇಶ ಇದ್ದುದರಿಂದ ಇದುವರೆಗೂ ಯಾವ ಕ್ರಮವನ್ನು ಸರಕಾರದವರು ತೆಗೆದುಕೊಂಡಿಲ್ಲ.

MADAM SPEAKER.—Now Question Hour is over.